4. ಸಭೆಯ ಮುಂದಿಡಲಾದ ಕಾಗದ ಪತ್ರಗಳು

1 ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿ):- ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿಪಡೆದು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ ಪ್ರಕರಣ 8(3)ರ ಮೇರೆಗೆ:

1. 2000ರ ಕರ್ನಾಟಕ ಸಿವಿಲ್ ಸರ್ವೀಸಸ್ (ಪರ್‌ಫಾರ್ಮೆನ್ಸ್ ರೀಪೋರ್ಟ್) ವಿಶೇಷ ಕಾರ್ಯನಿರ್ವಹಣಾ ವರದಿಯ ಎಸಿಆರ್ ನಿಯಮಗಳ ನಿಯಮ 7ಎಗೆ ತಿದ್ದುಪಡಿ ಮಾಡಿ ದಿನಾಂಕ 4-10-02ರಂದು ಹೊರಡಿಸಲಾದ ಸಿಆಸುಇ:05:ಎಸಿಆರ್:2001ರ ಸಂಖ್ಯೆಯ ಅಧಿಸೂಚನೆ;

2. 1996ರ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳ ನಿಯಮ 29ಸಿಗೆ ತಿದ್ದುಪಡಿ ಮಾಡಿ ದಿನಾಂಕ 5-2-2004ರಂದು ಹೊರಡಿಸಲಾದ ಸಿಆಸುಇ:06:ಸೇನಿಸಿ:2002ನೇ ಸಂಖ್ಯೆಯ ಅಧಿಸೂಚನೆ;

3. 1974ರ ಕರ್ನಾಟಕ ನಾಗರೀಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳ) ನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ 3-2-2004ರಂದು ಹೊರಡಿಸಲಾದ ಸಿಆಸುಇ:11:ಸೇನಿ: 2003ನೇ ಸಂಖ್ಯೆಯ ಅಧಿಸೂಚನೆ;

4. 1977ರ ಕರ್ನಾಟಕ ಸಿವಿಲ್ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳ ನಿಯಮ 2 ಮತ್ತು 3ಬಿ ಗಳಿಗೆ ತಿದ್ದುಪಡಿ ಮಾಡಿ ದಿನಾಂಕ 3-2-2004ರಂದು ಹೊರಡಿಸಲಾದ ಸಿಆಸುಇ:111:ಎಸ್‌ಆರ್ :2002ನೇ ಸಂಖ್ಯೆಯ ಅಧಿಸೂಚನೆ;

5. 1974ರ ಕರ್ನಾಟಕ ನಾಗರೀಕ ಸೇವಾ (ಸೇವಾ ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮದ ಅನುಸೂಚಿ-2ಕ್ಕೆ ತಿದ್ದುಪಡಿ ಮಾಡಿ ದಿನಾಂಕ 20-2-2004 ರಂದು ಹೊರಡಿಸಲಾದ ಸಿಆಸುಇ:13:ಸೆಸೆನಿ:2003ನೇ ಸಂಖ್ಯೆಯ ಅಧಿಸೂಚನೆ;

6. 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 9ಕ್ಕೆ ತಿದ್ದುಪಡಿ ಮಾಡಿ ದಿನಾಂಕ 20-2-2004ರಂದು ಹೊರಡಿಸಲಾದ ಸಿಆಸುಇ:21:ಎಸ್‌ಡಿಇ:2003ನೇ ಸಂಖ್ಯೆಯ ಅಧಿಸೂಚನೆ;

7. ಕರ್ನಾಟಕ ಅಂಗವಿಕಲ ಮತ್ತು ಹಿರಿಯ ನಾಗರೀಕ ಸೇವೆಗಳು (ನೇಮಕಾತಿ) ನಿಯಮಗಳು 2004ಅನ್ನು ಹೊಸದಾಗಿ ರಚಿಸಿ ದಿನಾಂಕ 1-4-2004ರಂದು ಹೊರಡಿಸಲಾದ ಸಿಆಸುಇ:101:ಎಸ್‌ಆರ್‌ಡಿ:98(ಭಾ)ನೇ ಸಂಖ್ಯೆಯ ಅಧಿಸೂಚನೆ;

8. 1992ರ ಕರ್ನಾಟಕ ಸರ್ಕಾರಿ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳಿಗೆ ತಿದ್ದುಪಡಿ ಮಾಡಿ ದಿನಾಂಕ 17-5-2004ರಂದು ಹೊರಡಿಸಲಾದ ಸಿಆಸುಇ:74) ಎಸ್‌ಆರ್‌ಡಿ:2003ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುವುದು.

1964ನೇ ಇಸವಿಯ ಕರ್ನಾಟಕ ಸಿನಿಮಾ (ನಿಯಂತ್ರಣ) ಅಧಿನಿಯಮ 20ನೇ ಪ್ರಕರಣ ಮೇರೆಗೆ:

9. ಮೆ: ಯುನೈಟೆಡ್ ಸೋಶಿಯಲ್ ಸರ್ವೀಸ್ (ರಿ), ಬಾಗಲಕೋಟೆ ಇವರಿಗೆ ದಿನಾಂಕ 16-2-2004 ರಿಂದ 15-4-2004ರ ವರೆಗೆ 'ಜುರಾಸಿಕ್ ಎನಿಮಲ್ಸ್' ಮಕ್ಕಳ ಚಲನಚಿತ್ರವನ್ನು

ಗದಗ ಜಿಲ್ಲೆಯ ಆಯ್ದ ಚಲನಚಿತ್ರ ಮಂದಿರಗಳಲ್ಲಿ 5ನೇ ಪ್ರದರ್ಶನವನ್ನಾಗಿ ಅಲ್ಲಿಯ ಜಿಲ್ಲಾಧಿಕಾರಿಗಳ ಸಹಯೋಗದೊಂದಿಗೆ ಪ್ರದರ್ಶಿಸಲು (ಬೆಳಗಿನ ವಿಶೇಷ ಪ್ರದರ್ಶನ) ಅನುಮತಿ ನೀಡಿ ದಿನಾಂಕ 17–2–2003ರಂದು ಹೊರಡಿಸಲಾದ ಒಸಾಇ:12:ಸಿಎನ್‌ಎ:2004ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುವುದು.

1993ನೇ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಪ್ರಕರಣದ 320ರ ಮೇರೆಗೆ:

10. 1993ರ ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ ದಿನಾಂಕ 7–2–2004 ರಂದು ಹೊರಡಿಸಲಾದ ಗ್ರಾಅಪ:104:ಜಿಪಸ:2003ನೇ ಸಂಖ್ಯೆಯ ಅಧಿಸೂಚನೆ;

11. 1993ರ ಕರ್ನಾಟಕ ಪಂಚಾಯತ್ ರಾಜ್ (ಚುನಾವಣೆಯನ್ನು ನಡೆಸುವ) ನಿಯಮಗಳ ನಿಯಮ 12ಕ್ಕೆ ತಿದ್ದುಪಡಿ ಮಾಡಿ ದಿನಾಂಕ 7–2–2004ರಂದು ಹೊರಡಿಸುವ ಗ್ರಾಅಪ:168:ಜಿಪಸ: 2003ನೇ ಸಂಖ್ಯೆಯ ಅಧಿಸೂಚನೆ;

12. 1993ರ ಕರ್ನಾಟಕ ಪಂಚಾಯತ್ ರಾಜ್ (ಗ್ರಾ ಪಂಚಾಯಿತಿಗಳ ಲೆಕ್ಕಪತ್ರಗಳು ಮತ್ತು ಬಡ್ಜೆಟ್) ನಿಯಮಗಳ ನಿಯಮ 7ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29–8–2003ರಂದು ಹೊರಡಿಸಲಾದ ಗ್ರಾಅಪ:43:ಜಿಪಸ:2002ನೇ ಸಂಖ್ಯೆಯ ಅಧಿಸೂಚನೆ;

13. 1993ರ ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳ ನಡುವೆ ಕಾರ್ಯ ಹಂಚಿಕೆಯನ್ನು ಮುನಃ ವಿಂಗಡಿಸಿ ದಿನಾಂಕ 18–8–2003 ರಂದು ಹೊರಡಿಸಲಾದ ಗ್ರಾಅಪ:367:ಜಿಪಸ:2002ನೇ ಸಂಖ್ಯೆಯ ಅಧಿಸೂಚನೆ

2001 ಕರ್ನಾಟಕ ಧೂಮಪಾನ ನಿಷೇಧ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ಅಧಿನಿಯಮದ ಪ್ರಕರಣದ 15(2)ರ ಮೇರೆಗೆ:–

14. ಕರ್ನಾಟಕ ಧೂಮಪಾನ ನಿಷೇದ ಮತ್ತು ಧೂಮಪಾನ ಮಾಡದವರ ಆರೋಗ್ಯ ರಕ್ಷಣೆ ನಿಯಮಗಳನ್ನು ರಚಿಸಿ ದಿನಾಂಕ: 6–3–2004ರಂದು ಹೊರಡಿಸಲಾದ ಆಕುಕ:20:ಎಸ್‌ಎಂಎಂ: 97ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) (ಹಣಕಾಸು ಸಚಿವರು) ಮಾನ್ಯ ಅಧ್ಯಕ್ಷರೇ ತಮ್ಮ ಅನುಮತಿ ಪಡೆದು ಈ ಕೆಳಕಂಡ ಕಾಗದ ಪತ್ರಗಳನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

1965ರ ಕರ್ನಾಟಕ ಅಬಕಾರಿ ಅಧಿನಿಯಮ 71(4)ರ ಮೇರೆಗೆ:

15. 1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳ ನಿಯಮ 3ಕ್ಕೆ ತಿದ್ದುಪಡಿ ಮಾಡಿ ದಿನಾಂಕ 3–2–2004ರಂದು ಹೊರಡಿಸಲಾದ ಆಇ:02:ಪಿಇಎಸ್:2004ನೇ ಸಂಖ್ಯೆಯ ಅಧಿಸೂಚನೆ;

16. 1968ರ ಕರ್ನಾಟಕ ಅಬಕಾರಿ (ಅಬಕಾರಿ ಸುಂಕಗಳು ಮತ್ತು ಶುಲ್ಕಗಳು) ನಿಯಮಗಳ ನಿಯಮ ಅನುಸೂಚಿ 'ಎ ಮತ್ತು ಡಿ'ಗಳಿಗೆ ತಿದ್ದುಪಡಿ ಮಾಡಿ ದಿನಾಂಕ 17–2–2004ರಂದು ಹೊರಡಿಸಲಾದ ಆಇ:05:ಪಿಇಎಸ್:2004ನೇ ಸಂಖ್ಯೆಯ ಅಧಿಸೂಚನೆ;

17. 1967ರ ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳ ನಿಯಮ 7ಎಗೆ ತಿದ್ದುಪಡ ಮಾಡಿ ದಿನಾಂಕ 23–2–2004ರಂದು ಹೊರಡಿಸಲಾದ ಆಇ:36:ಪಿಇಎಸ್:2003 (1)ನೇ ಸಂಖ್ಯೆಯ ಅಧಿಸೂಚನೆ;

18. 1967ರ ಕರ್ನಾಟಕ ಅಬಕಾರಿ (ಬ್ರಿವರಿ) ನಿಯಮಗಳ ನಿಯಮ 5ಎಗೆ ತಿದ್ದುಪಡಿ ಮಾಡಿ ದಿನಾಂಕ 23–2–2004ರಂದು ಹೊರಡಿಸಲಾದ ಆಇ:36:ಪಿಇಎಸ್:2003(2)ನೇ ಸಂಖ್ಯೆಯ ಅಧಿಸೂಚನೆ;

19. 1976ರ ಕರ್ನಾಟಕ ಅಬಕಾರಿ (ಬಿಯರ್ ಅನ್ನು ಚಿಲ್ಲರೆಯಾಗಿ ಮಾರಾಟ ಮಾಡುವ ಹಕ್ಕಿನ ಗುತ್ತಿಗೆ) ನಿಯಮಗಳ ನಿಯಮ 5ಎಗೆ ತಿದ್ದುಪಡಿ ಮಾಡಿ ದಿನಾಂಕ 23–2–2004ರಂದು ಹೊರಡಿಸಲಾದ ಆಇ:36:ಪಿಇಎಸ್:2003(3)ನೇ ಸಂಖ್ಯೆಯ ಅಧಿಸೂಚನೆ;

20. 1968ರ ಕರ್ನಾಟಕ ಅಬಕಾರಿ (ದ್ರಾಕ್ಷಿಯಿಂದ ವೈನ್ ತಯಾರಿಕೆ) ನಿಯಮಗಳ ನಿಯಮ 8ಕ್ಕೆ ತಿದ್ದುಪಡಿ ಮಾಡಿ ದಿನಾಂಕ 23–2–2004ರಂದು ಹೊರಡಿಸಲಾದ ಆಇ:36:ಪಿಇಎಸ್:2003(4)ನೇ ಸಂಖ್ಯೆಯ ಅಧಿಸೂಚನೆ;

21. 1968ರ ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯಗಳ ಮಾರಾಟ) ನಿಯಮಗಳ ನಿಯಮ 8ಎಗೆ ತಿದ್ದುಪಡಿ ಮಾಡಿ ದಿನಾಂಕ 23–2–2004ರಂದು ಹೊರಡಿಸಲಾದ ಆಇ:36:ಪಿಇಎಸ್:2003(5)ನೇ ಸಂಖ್ಯೆಯ ಅಧಿಸೂಚನೆ;

1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

22. ರಾಜ್ಯದ ಬರ ಪ್ರದೇಶಗಳಲ್ಲಿ ಕೊಳವೆ ಬಾವಿ ಕೊರೆಯಲು ಬಳಸುವ ಡ್ರೀಲಿಂಗ್ ರಿಗ್ಸ್‌ಗಳ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಯನ್ನು ದಿನಾಂಕ 1–11–2003ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 5–2–2004ರಂದು ಹೊರಡಿಸಲಾದ ಆಇ:02:ಸಿಇಟಿ:2004ನೇ ಸಂಖ್ಯೆಯ ಅಧಿಸೂಚನೆ;

23. ದಿನಾಂಕ 3–6–2003ರಂದು ಹೊರಡಿಸಲಾದ ಆಇ:32:ಸಿಇಟಿ:2000ರ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 24–1–2004ರಂದು ಹೊರಡಿಸಲಾದ ಆಇ:88:ಸಿಇಟಿ: 2003ನೇ ಸಂಖ್ಯೆಯ ಅಧಿಸೂಚನೆ;

24. ವಿದೇಶಿ ರಾಯಬಾರಿ ದೂತವರ್ಗದವರು ತರುವ ವಾಹನಗಳಿಗೆ ಅಥವಾ ವರ್ತಕರು ವಿದೇಶಿ ರಾಯಭಾರ ವರ್ಗದವರಿಗೆ ಅಥವಾ ಸದಸ್ಯರಿಗೆ ಅವರ ಅಧಿಕೃತ ಉಪಯೋಗಕ್ಕಾಗಿ ಮಾರಾಟ ಮಾಡುವ ವಾಹನಗಳಿಗೆ ದಿನಾಂಕ 1–11–2003ರಿಂದ ಜಾರಿಗೆ ಬರುವಂತೆ ಘೋಷಣಾ ಪತ್ರ ಸಲ್ಲಿಸುವ ಷರತ್ತಿನ ಮೇಲೆ ಪ್ರವೇಶ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ: 23–2–2004ರಂದು ಹೊರಡಿಸಲಾದ ಆಇ:72:ಸಿಇಟಿ:2003ರ ಸಂಖ್ಯೆಯ ಅಧಿಸೂಚನೆ;

25. ಮೆ: ಟಿ.ವಿ.ಎಸ್. ಮೋಟಾರ್ ಕಂಪನಿ ನಿಯಮಿತ ಬ್ಯಾಡಹಳ್ಳಿ, ಮೈಸೂರು ಇವರ 2ನೇ ಹಂತದ ವಿಸ್ತರಣಾ ಯೋಜನೆಗೆ ಬಳಸಲು ಯಂತ್ರೋಪಕರಣಗಳ ಸ್ಥಳೀಯ ಪ್ರವೇಶದ ಮೇಲೆ ಪಾವತಿಸಬೇಕಾದ ಪ್ರವೇಶ ತೆರಿಗೆಗೆ ಸಾರ್ವಜನಿಕರ ಹಿತದೃಷ್ಟಿಯಿಂದ 10 ವರ್ಷಗಳ ಕಾಲ ವಿನಾಯಿತಿ ನೀಡಿ ದಿನಾಂಕ 11–3–2004ರಂದು ಹೊರಡಿಸಲಾದ ಎಫ್‌ಡಿ:333:ಸಿಎಸ್‌ಎಲ್:03(4)ನೇ ಸಂಖ್ಯೆಯ ಅಧಿಸೂಚನೆ;

26. ದಿನಾಂಕ 5–7–2001ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ: ಆಇ:320: ಸಿಎಸ್ಎಲ್:2000(12)ನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ದಿನಾಂಕ 11–3–2004ರಂದು ಹೊರಡಿಸಲಾದ ಆಇ:333:ಸಿಎಸ್ಎಲ್:2003(6)ನೇ ಸಂಖ್ಯೆಯ ಅಧಿಸೂಚನೆ;

1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ 39ರ ಪ್ರಕರಣದ ಮೇರೆಗೆ:

27. ಆಹಾರ ಪಡಿತರ ಚೀಟಿದಾರರಿಗೆ ವಿತರಿಸುವ ಸೀಮೆಎಣ್ಣೆಯ ಮೇಲೆ ವರ್ತಕರು ಪಾವತಿಸಬೇಕಾದ ಮಾರಾಟ ತೆರಿಗೆಗೆ ದಿನಾಂಕ 1–2–2004 ರಿಂದ ವಿನಾಯಿತಿ ನೀಡಿ ದಿನಾಂಕ 4–2–2004ರಂದು ಹೊರಡಿಸಲಾದ ಆಇ:24:ಸಿಎಸ್ಎಲ್:2004ನೇ ಸಂಖ್ಯೆಯ ಅಧಿಸೂಚನೆ;

28. ಕೆಲವೊಂದು ಸರಕುಗಳ ಮೇಲಿನ ಮಾರಾಟ ತೆರಿಗೆಯನ್ನು ದಿನಾಂಕ 1–2–2004ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31–1–2004 ರಂದು ಹೊರಡಿಸಲಾದ ಆಇ:24: ಸಿಎಸ್ಎಲ್:2004ನೇ ಸಂಖ್ಯೆಯ ಅಧಿಸೂಚನೆ;

29. ದಿನಾಂಕ 1–3–2004 ರಿಂದ ಜಾರಿಗೆ ಬರುವಂತೆ ಹಾರಾಜುದಾರರು ಪಾವತಿಸಬೇಕಾದ ಏಲಕ್ಕಿ ಮತ್ತು ಮೆಣಸು ಮೇಲಿನ ಮಾರಾಟ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 1–3–2004 ರಂದು ಹೊರಡಿಸಲಾದ ಅ:340:ಸಿಎಸ್ಎಲ್:2003ನೇ ಸಂಖ್ಯೆಯ ಅಧಿಸೂಚನೆ;

30. ಮೆ: ಟಿ.ವಿ.ಎಸ್. ಮೋಟಾರ್ ಕಂಪನಿ ಲಿಮಿಟೆಡ್ ಮೈಸೂರು ಜಿಲ್ಲೆ ಇವರು ವಾಣಿಜ್ಯ ಉತ್ಪಾದನೆ ಪ್ರಾರಂಭಿಸುವ ದಿನಾಂಕದಿಂದ ಹಲವು ಷರತ್ತುಗೊಳಪಡಿಸಿ 10 ವರ್ಷಗಳ ತೆರಿಗೆ ವಿನಾಯಿತಿ ಅಥವಾ 12 ವರ್ಷಗಳವರೆಗೆ ತೆರಿಗೆಯನ್ನು ಮುಂದೂಡಿಕೆ ನೀಡಿ ದಿನಾಂಕ 11–3–2004 ರಂದು ಹೊರಡಿಸಲಾದ ಆಇ:333:ಸಿಎಸ್ಎಲ್:2003(1)ನೇ ಸಂಖ್ಯೆಯ ಅಧಿಸೂಚನೆ;

31. ಮೆ: ಟಿ.ವಿ.ಎಸ್. ಮೋಟಾರ್ ಕಂಪನಿ ಲಿಮಿಟೆಡ್ ಮೈಸೂರು ಜಿಲ್ಲೆ ಇವರು ಉತ್ಪಾದಿಸಿ ಹಾಗೂ ಮಾರಾಟ ಮಾಡುವ ವಸ್ತುಗಳ ಮೇಲೆ ಪಾವತಿಸಬೇಕಾದ ಕೇಂದ್ರ ಮಾರಾಟ ತೆರಿಗೆ 10 ವರ್ಷಗಳ ಕಾಲ ವಿನಾಯಿತಿ ಅಥವಾ 12 ವರ್ಷದವರೆಗೆ ಮುಂದೂಡಿಕೆಯನ್ನು ವಾಣಿಜ್ಯ ಉತ್ಪಾದನೆ ಪ್ರಾರಂಭಿಸಿದ ದಿನಾಂಕದಿಂದ ವಿನಾಯಿತಿ ನೀಡಿ ದಿನಾಂಕ 11–3–2004ರಂದು ಹೊರಡಿಸಲಾದ ಆಇ:333:ಸಿಎಸ್ಎಲ್:2003(2)ನೇ ಸಂಖ್ಯೆಯ ಅಧಿಸೂಚನೆ;

32. ದಿನಾಂಕ 5–7–2001ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ:220: ಸಿಎಸ್ಎಲ್:2000(10)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 11–3–2004ರಂದು ಹೊರಡಿಸಲಾದ ಆಇ:333:ಸಿಎಸ್ಎಲ್:2003(3)ನೇ ಸಂಖ್ಯೆಯ ಅಧಿಸೂಚನೆ;

33. ದಿನಾಂಕ 5–7–2001ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂಖ್ಯೆ: ಆಇ:220: ಸಿಎಸ್ಎಲ್:2000(8) ಹಾಗೂ ಆಇ:220:ಸಿಎಸ್ಎಲ್:2000(9)ಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ದಿನಾಂಕ 11–3–2004ರಂದು ಹೊರಡಿಸಲಾದ ಆಇ:333:ಸಿಎಸ್ಎಲ್:2003 (5)ನೇ ಸಂಖ್ಯೆಯ ಅಧಿಸೂಚನೆ;

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

34. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 487(2)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 29–1–2004 ರಂದು ಹೊರಡಿಸಲಾದ ಆಇ:03:ಸನಿಟಿ:2003ನೇ ಸಂಖ್ಯೆಯ ಅಧಿಸೂಚನೆ;

35. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಾವಳಿ 2002ರ ನಿಯಮ 17ಕ್ಕೆ ತಿದ್ದುಪಡಿ ಮಾಡಿ ದಿನಾಂಕ 11ನೇ ಫೆಬ್ರವರಿ, 2004ರಂದು ಹೊರಡಿಸಲಾದ ಆಇ:04:ಸನಿತಿ:2000ನೇ ಸಂಖ್ಯೆಯ ಅಧಿಸೂಚನೆ;

36. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಮೂನೆ–1ಬಿಗೆ ತಿದ್ದುಪಡಿ ಮಾಡಿ ದಿನಾಂಕ 11–3–2004ರಂದು ಹೊರಡಿಸಲಾದ ಆಇ:07:ಸನಿತಿ:2003ನೇ ಸಂಖ್ಯೆಯ ಅಧಿಸೂಚನೆ;

37. 2002ರ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ (ಕುಟುಂಬ ನಿವೃತ್ತಿ ವೇತನ) ನಿಯಮಾವಳಿಗಳ ನಮೂನೆ 'ಎ'ಗೆ ತಿದ್ದುಪಡಿ ಮಾಡಿ ದಿನಾಂಕ 26ನೇ ಏಪ್ರಿಲ್, 2004ರಂದು ಹೊರಡಿಸಲಾದ ಆಇ:08:ಸನಿತಿ:2003ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

ಅಧ್ಯಕ್ಷರು:– ಮಂಡಿಸಲಾಯಿತು.

5. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ:– ಕೂಲಿಗಾಗಿ ಕಾಳು ಯೋಜನೆಯಡಿಯಲ್ಲಿ ನಡೆದಿರುವ ಅವ್ಯವಹಾರದ ಕುರಿತು

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಲುವಳಿ ಸೂಚನೆ ನಾವು ಸಹ ಕೊಟ್ಟಿದ್ದೇವೆ.

ಅಧ್ಯಕ್ಷರು:– ಇದಾದ ಮೇಲೆ ತಮಗೆ ಅವಕಾಶ ಕೊಡುತ್ತೇನೆ

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಲುವಳಿ ಸೂಚನೆ ಕೊಟ್ಟಾಗ ತಾವು ಸಭೆ ನಡೆಸುವುದಕ್ಕೆ ಬರುವುದಿಲ್ಲ.

+ಶ್ರೀ ಬಿ.ಎಸ್. ಯಡಿಯೂಪ್ಪ (ವಿರೋಧ ಪಕ್ಷದ ನಾಯಕರು):– ನಾವೇನು ಪ್ರತಿ ಪಕ್ಷದ ಸದಸ್ಯರು ಎಲ್ಲರೂ ಸೇರಿ ನಿಲುವಳಿ ಸೂಚನೆಯನ್ನು ಪ್ರಸ್ತಾಪ ಮಾಡಿದ್ದೇವೆ. ತಾವು ಆದ್ಯತೆ ಕೊಡಬೇಕಾಗುತ್ತೆ, ಅದು ಚರ್ಚೆ ಆಗಿ ಮುಗಿದ ಮೇಲೆ ತಾವು ರೆಗ್ಯುಲರ್ ಬಿಸ್‌ನೆಸ್ ತೆಗೆದುಕೊಳ್ಳಬೇಕೇ ಹೊರತು.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ಮತ್ತು ಇತರರಲ್ಲಿ ನಾನು ವಿನಂತಿ ಮಾಡುವುದು ಏನೆಂದರೆ, ಇವತ್ತು ಕೆಲವು ವಿಷಯಗಳು ಇವೆ. ಆದಾದ ಮೇಲೆ ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ:– ಸಂಸದೀಯ ವ್ಯವಹಾರಗಳ ಸಚಿವರು ಹೇಳಲಿ, ನಿಲುವಳಿ ಸೂಚನೆ ಇರುವಂತಹ ಸಂದರ್ಭದಲ್ಲಿ ಬೇರೆ ಕಾರ್ಯಕಲಾಪಗಳು ನಡೆಯುವುದಕ್ಕೆ ಅವಕಾಶ ಇದೆಯೊ? ತಾವೇ ಹೇಳಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಮತ್ತು ವ್ಯವಹಾರಗಳ ಸಚಿವರು):– ಸನ್ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ತಮ್ಮ ಮನವೊಲಿಸಿ ತೆಗೆದುಕೊಳ್ಳಬೇಕು, ಬೇಡ ಎಂದು ಪ್ರಸ್ತಾಪ ಮಾಡುವ ಅಂತರ್ಗತವಾದ ಹಕ್ಕು ತಮಗೆ ಇದೆ, ಎಲ್ಲರಿಗೂ ಇದೆ. ಇಲ್ಲಿ ಬಂದಿರುವುದು ಕೇವಲ ನಮ್ಮ ಮುಂದಿನ ಲೆಕ್ಕ ಪತ್ರಗಳು ಸಮಿತಿ....

ಶ್ರೀ ವಾಟಾಳ್ ನಾಗರಾಜ್:– ನಿಲುವಳಿ ಸೂಚನೆ ಎಂದರೆ ಒಂದು ಪತ್ರವನ್ನೂ ಕೂಡ ಓದುವುದಕ್ಕಾಗುವುದಿಲ್ಲ. ಯಾವುದೇ ಕಾರ್ಯಕ್ರಮ ಇಲ್ಲ. ಅದನ್ನೇ ತೆಗೆದುಕೊಳ್ಳಬೇಕು. ತಾವು ನಿಲುವಳಿ ಸೂಚನೆಗೆ ಅವಕಾಶ ಕೊಡಬೇಕು. ಇಲ್ಲಿ ಕೂಲಿಗಾಗಿ ಕಾಳು ನಡೆದಿರತಕ್ಕಂತಹ ದೊಡ್ಡ